ಬರುವುದಿಲ್ಲ, ಅಂಥದ್ದರಲ್ಲಿ ನನಗಾದರೂ ಹೇಗೆ ಸಾಧ್ಯ ಎಂದು ಹಿಂಜರಿಕೆಯಾಯಿತು. ಹೋಗಲಿ ಮಯೂರನಂತೆ ರೆಕ್ಕೆ ಹಚ್ಚಿಕೊಂಡು ಮಯೂರಿಯಾಗಿ ನರ್ತಿಸಲಾ ಎಂದೆಲ್ಲಾ ಮನದಲ್ಲೇ ಕುಣಿದೆ (ಮಯೂರಿಗಳಿಗೆ ಚೆಂದದ ರೆಕ್ಕೆಗಳೇ ಇರುವುದಿಲ್ಲವಲ್ಲಾ ಮತ್ತು ಅವುಗಳ ಚೆಂದವೋ... ನಾನಂತೂ ಮಯೂರನ ರೆಕ್ಕೆ ಹಚ್ಚಿಕೊಂಡು ಮಯೂರಿಯಾಗಿ ನರ್ತಿಸಲು ತಯಾರಾಗಿ ನಿಂತುಬಿಟ್ಟಿದ್ದೆ). ಆದರೆ ಅವೆಲ್ಲಾ ಪ್ರಯೋಗಕ್ಕಿಳಿಯುವ ಮಾರ್ಗಗಳಾಗಿರಲಿಲ್ಲ. ಕೊನೆಗೆ ಚೆಂದದೊಂದು ಚಾಮರ ಮಾಡಿಟ್ಟುಕೊಂಡೆ. ಖುಷಿಯಾಯಿತು. ಮನೆಗೆ ಬಂದವರಿಗೆಲ್ಲಾ ಅದನ್ನು ತೋರಿಸಿ ತೋರಿಸಿ... ಕೊನೆ ಕೊನೆಗೆ ಎರಡು ಮೂರು ಬಾರಿ ಕೇಳಿಸಿಕೊಂಡವರು 'ಓ ಇದು ನಿನ್ನ ಸ್ಟೂಡೆಂಟ್ಸ್ ಕೊಟ್ಟ ನವಿಲುಗರಿಗಳಲ್ವಾ? ಮತ್ತೆ ಈ ಬೀಸಣಿಕೆಯನ್ನು ನೀನೇ ನಿನ್ನ ಕೈಯಾರೆ ಮಾಡಿದ್ದು ಅಲ್ವಾ?' ಎಂದು ನನ್ನನ್ನೇ ಅಣಕಿಸುವಂತೆ ಕೇಳಿ ಪೇಚಿಗೆ ಸಿಲುಕಿಸತೊಡಗಿದರು. ಅದು ಹೋದರೆ ಹೋಗಲಿ ನನ್ನ ಚಾಮರವನ್ನ ಅವರು ಖಾಲೀ ಪೀಲೀ ಬೀಸಣಿಕೆ ಎನ್ನುವಾಗ ಮಾತ್ರ ಇವರನ್ನ ಮತ್ತೊಮ್ಮೆ ಮನಗೇ ಸೇರಿಸಬಾರದು ಎನ್ನುವಷ್ಟು ಕೋಪ ಬಂದುಬಿಡುತ್ತಿತ್ತು. ಆದರೂ 'ಎಲ್ಲಾದ್ರೂ ಹಾಳಾಗ್ ಹೋಗ್ಲಿ...' ಅಂತ ಸುಮ್ಮನಾಗುತ್ತಿದ್ದೆ, ಬಾಲ ಸುಟ್ಟ ಬೆಕ್ಕಿನಂತೆ.

ನನ್ನ ಇಂಥ ಗರಿಗಳ ಅನುಭವಗಳನ್ನೆಲ್ಲ ಇಟ್ಟುಕೊಂಡು, ಇಂಥದ್ದೇ ಏನಾದರೂ ಹೊಸ ಬಗೆಯ ಜಾದೂ ನಡೆಯಲೆಂದು ಆಶಿಸಿ, ನನ್ನ ವಿದ್ಯಾರ್ಥಿಗಳಿಗೂ ಒಮ್ಮೆ ಗರಿಗಳ ಸಂಗ್ರಹಮಾಡಿಕೊಂಡು ಬರಲು ತಿಳಿಸಿದೆ. ಮಾದರಿಗಾಗಿ ನನ್ನ ಸ್ವಂತ ಸಂಗ್ರಹದ ಪುರಾತನ ಡೈರಿಯನ್ನು ತಂದು ಜಂಭದಿಂದ ತೋರಿಸಿ ಹೀಗೆ ಮಾಡಿಕೊಂಡು ಬನ್ನಿ ಎಂದು ಹೇಳಿದೆ. ಹೇಳಿ ತಿಂಗಳಾಯಿತಷ್ಟೇ... ಯಾರದ್ದೂ ಸಂಗ್ರಹವೆಂಬುದು ಬರಲಿಲ್ಲ. ಕೊನೆಗೆ ನಾನೇ ನೆನೆಗುದಿಗೆ ಬಿದ್ದಿದ್ದ ಸಂಗ್ರಹ ಕಾರ್ಯವನ್ನ ನೆನಪಿಸಿ ದುಂಬಾಲು ಬಿದ್ದು ಕೇಳಿದ್ದಕ್ಕೆ ಒಂದಿಬ್ಬರು ಒಂದೆರೆಡು ಗರಿಗಳನ್ನು ಹಿಡಿದು

